ಪೂರ್ಣವಾಗಿ ಹಾಗೂ 362 ಮನೆಗಳು ಭಾಗಶಃ ಹಾನಿಗೊಳಗಾಗಿವೆ.

ಆ) ಒಟ್ಟು 5124 ಮನೆಗಳಿಗೆ ಹಾನಿಯಾಗಿದ್ದು, ನಷ್ಟ ರೂ 3.93 ಲಕ್ಷ ಎಂದು ಅಂದಾಜಿಸಲಾಗಿದೆ.

ಇ) ಸಮುದ್ರ ಕೊರೆತದಿಂದ ಭೀತಿಗೊಳಗಾದ ಜನರಿಗೆ ಉಳ್ಳಾಲದಲ್ಲಿ ಗಂಜಿ ಕೇಂದ್ರವನ್ನು ತೆರೆದು ನಿರ್ವಹಿಸಿಲಾಗಿದೆ. ಅಲ್ಲದೆ ಮನೆ ದುರಸ್ತಿ ಬಗ್ಗೆ ಸರ್ಕಾರದ ಮಾರ್ಗಸೂಚಿ ಅನುಸಾರ ಎಲ್ಲಾ 124 ಪ್ರಕರಣಗಳಲ್ಲಿ ಒಟ್ಟು ರೂ 2.29 ಲಕ್ಷ ಪರಿಹಾರ ಧನವನ್ನು ಜಿಲ್ಲಾಧಿಕಾರಿಗಳು, ದಕ್ಷಿಣಕನ್ನಡ ಜಿಲ್ಲೆ ಇವರು ಮಂಜೂರು ಮಾಡಿರುತ್ತಾರೆ.

ವಿಷಯ : ರಾಜ್ಯದಲ್ಲಿ ಹೊಸ ಸರ್ವೆ ಕೆಲಸದ ಪ್ರಾರಂಭ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 550 (28)

ಶ್ರೀ ಕೆ.ಜಯರಾಮ ಶೆಟ್ಟಿ (ಉಳ್ಳಾಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಾಲಿಯಿರುವ ಭೂ ಅಳತೆ ಮತ್ತು ಸರ್ವೆ ಕೆಲಸಗಳು ಎಷ್ಟು ಹಿಂದಿನದು.

ಆ) ಹೊಸ ಸರ್ವೆ ಕೆಲಸ ಪ್ರಾರಂಭಿಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ.

ಇ) ಹೊಸ ಜಮೀನುಗಳ ಹಳೇ ಸರ್ವೆ ನಂಬರ್‌ಗಳಲ್ಲಿ ವ್ಯತಿರಿಕ್ತವಾಗಿ ಗುರುತಿಸಲ್ಪಟ್ಟಿರುವುದರಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) 105 ವರ್ಷಗಳಷ್ಟು ಹಿಂದಿನವು.

ಆ) ಹೌದು.

ಇ) ಹಿಂದಿನ ಇನಾಂ ಗ್ರಾಮಗಳಲ್ಲಿ ಮಾತ್ರ ವ್ಯತ್ಯಾಸವಾಗಿರುವುದು ಗಮನಕ್ಕೆ ಬಂದಿದೆ.

ವಿಷಯ:- ಹುಬ್ಬಳ್ಳಿ ಗ್ರಾಮಿಣ ಪ್ರದೇಶದಲ್ಲಿ ಅಂಗನವಾಡಿ ಕೇಂದ್ರಕ್ಕೆ ಕಟ್ಟಡ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 552 (702)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?